## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಖಾಸಗಿ ಅನುದಾನಿತ ಕಾಲೇಜುಗಳ ಬೋಧಕೇತರರಿಗೆ ಗ್ರಂಥಪಾಲಕರಾಗಿ ನೀಡಿರುವ ಮುಂಬಡ್ತಿಯನ್ನು ಸ್ಥಿರೀಕರಿಸಿ ರಾಜ್ಯ ವೇತನ ಶ್ರೇಣಿಯಲ್ಲಿ ವೇತನವನ್ನು ನಿಗಧಿಪಡಿಸುವ ಬಗ್ಗೆ.

ಓದಲಾಗಿದೆ:

1. ರಾಜ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:50788/2014 ಮತ್ತು ಇತರೆ ಪ್ರಕರಣಗಳಲ್ಲಿ ದಿನಾಂಕ:26-04-2017 ರಂದು ನೀಡಿರುವ ತೀರ್ಪು.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 228 ಯುಪಿಸಿ 2015, ದಿನಾಂಕ: 24-06-2020.
3. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ:ಕಾಶಿಇ/236/ ತ್ರಿಸೌಯೋ/ಸಿಆರ್2 /2017-18, ದಿನಾಂಕ: 15-11-2021.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ(1) ರ ದಿನಾಂಕ:26-04-2017 ರ ತೀರ್ಪಿನಲ್ಲಿ ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯವು ಈ ಕೆಳಕಂಡಂತೆ ಆದೇಶಿಸಿದೆ.

1. Writ petitions are hereby allowed in part and order dated: 17-10-2014 and Nill. 10.2014 – Annexure-A in W.P. Nos.49877/2014, 50808/2014, 50788/2014, 49878/2014 and Annexure-AP, AQ, AR, AS, AT in W.P.Nos.51261-266/2014 & 51264-66/2014 respectively are hereby quashed.
2. Respondent Nos.1 to 3 are hereby directed to seek the approval of the UGC insofar as recruitment of petitioners by promotion in the light of observations made herein above. However, it is made clear that no opinion is expressed with regard to the manner in which such request is to be considered by the UGC since it is not a party to the present proceedings and it would be in the domain of UGC to examine the same in the manner known to law.
3. In the event of the request for grant of approval of petitioners promotion submitted by respondent Nos.1 to 3 to the UGC is rejected for any reason, same shall be communicated to the petitioners by respondent No.2 and call upon them to show cause as to why their promotions should be withdrawn and on consideration of their replies submitted, it would be at liberty to proceed to pass orders on merits and in accordance with law."

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿನ ಸರ್ಕಾರದ ಆದೇಶ ದಿನಾಂಕ:24-06-2020 ರಲ್ಲಿ ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಖಾಸಗಿ ಅನುದಾನಿತ ಕಾಲೇಜುಗಳ ಬೋಧಕೇತರರಿಗೆ ವೃಂದ ಮತ್ತು ನೇಮಕಾತಿ ನಿಯಮದಂತೆ ಈಗಾಗಲೇ ನೀಡಿರುವ ಮುಂಬಡ್ತಿಯನ್ನು ಸ್ಥಿರೀಕರಿಸಿ ರಾಜ್ಯ ವೇತನ ಶ್ರೇಣಿಯಲ್ಲಿ ನಿಯಮಾನುಸಾರ ವೇತನ ನಿಗಧಿಪಡಿಸಲು ಸರ್ಕಾರ ಆದೇಶಿಸಿರುತ್ತದೆ.

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರ ಆಪ್ತ ಶಾಖೆ.
ಸಂಖ್ಯೆ 1121
ದಿನಾಂಕ 06 OCT 2022

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಇವರ ಪತ್ರದಲ್ಲಿ ಸದರಿ ಆದೇಶದಂತೆ ಬಡ್ತಿ ಹೊಂದಿದ ಗ್ರಂಥಪಾಲಕರಿಗೆ ಗ್ರಂಥಪಾಲಕರ ಹುದ್ದೆಗೆ ಬಡ್ತಿ ನೀಡಲಾದ ರಾಜ್ಯ ವೇತನ ಶ್ರೇಣಿಯ ಪ್ರಥಮ ದರ್ಜೆ ಸಹಾಯಕರ ವೇತನ ಶ್ರೇಣಿಯಲ್ಲಿ ವೇತನ ನಿಗಧಿಪಡಿಸಬೇಕೆ ಅಥವಾ ಇಲಾಖೆಯಲ್ಲಿ ಯು.ಜಿ.ಸಿ. ವೇತನ ಶ್ರೇಣಿಗಳ ಅನುಷ್ಠಾನಕ್ಕೂ ಪೂರ್ವದಲ್ಲಿದ್ದ ಉಪನ್ಯಾಸಕರುಗಳ ರಾಜ್ಯ ವೇತನ (ಹಾಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರುಗಳ ರಾಜ್ಯ ವೇತನ) ಶ್ರೇಣಿಯಲ್ಲಿ ವೇತನ ನಿಗಧೀಕರಣಗೊಳಿಸಬೇಕೆ ಎಂಬುದರ ಬಗ್ಗೆ ಸರ್ಕಾರದ ಮಾರ್ಗದರ್ಶನ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಬಡ್ತಿ ಹೊಂದಿದ ಗ್ರಂಥಪಾಲಕರಿಗೆ ಪ್ರಸ್ತುತ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಅಧೀಕ್ಷಕರಿಗೆ ನೀಡಲಾಗುತ್ತಿರುವ ರಾಜ್ಯ ವೇತನ ಶ್ರೇಣಿಯಲ್ಲಿ ವೇತನ ನಿಗಧಿಪಡಿಸಲು ಸರ್ಕಾರ ತೀರ್ಮಾನಿಸಿದ್ದು, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಇಡಿ 37 ಯುಪಿಸಿ 2022 (ಇ)

ಬೆಂಗಳೂರು, ದಿನಾಂಕ:30-09-2022

1. ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕಾಲೇಜು ಶಿಕ್ಷಣ ಇಲಾಖೆಯಲ್ಲಿನ ಖಾಸಗಿ ಅನುದಾನಿತ ಕಾಲೇಜುಗಳ ಬೋಧಕೇತರ ವೃಂದದಿಂದ ಗ್ರಂಥಪಾಲಕರ ಹುದ್ದೆಗೆ ಮುಂಬಡ್ತಿ ಹೊಂದಿದವರಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಅಧೀಕ್ಷಕರಿಗೆ ನೀಡಲಾಗುತ್ತಿರುವ ರಾಜ್ಯ ವೇತನ ಶ್ರೇಣಿಯಲ್ಲಿ ವೇತನ ನಿಗಧಿಪಡಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಆದೇಶಿಸಿದೆ.

I. ಗ್ರಂಥಪಾಲಕರ ಹುದ್ದೆಗೆ, ಮುಂಬಡ್ತಿ ಹೊಂದಿರುವ ಸಮಯದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಅಧೀಕ್ಷಕ ಹುದ್ದೆಗೆ ನಿಗಧಿಪಡಿಸಿದ್ದ ವೇತನ ಶ್ರೇಣಿಯನ್ನು ನಿಗಧಿಪಡಿಸುವುದು.
II. ಅನ್ವಯವಾಗುವ ನಿಯಮಗಳು / ಆದೇಶಗಳನ್ವಯ ವೇತನವನ್ನು ನಿಗಧಿಪಡಿಸುವುದು.
III. ರಾಜ್ಯ ಸರ್ಕಾರವು ವೇತನ ಶ್ರೇಣಿಗಳನ್ನು ಪರಿಷ್ಕರಿಸಿದ ಸಂದರ್ಭದಲ್ಲಿ ಅದನ್ನು ಸಂಬಂಧಿಸಿದ ಖಾಸಗಿ ಅನುದಾನಿತ ಸಂಸ್ಥೆಗಳು ಅಳವಡಿಸಿಕೊಂಡಾಗ ಪರಿಷ್ಕೃತ ವೇತನ ಶ್ರೇಣಿಯ ಸೌಲಭ್ಯಗಳು ಸದರಿ ನೌಕರರಿಗೆ ಅನ್ವಯವಾಗುತ್ತದೆ.
IV. ರಾಜ್ಯ ಸರ್ಕಾರದ ನೀತಿ-ನಿಯಮಗಳು ಮತ್ತು ಯುಜಿಸಿ ನಿಯಮಗಳಿಗೆ ವಿರುದ್ಧವಾಗಿದ್ದರೆ, ಹಿರಿಯ ವೇತನ ಶ್ರೇಣಿಯಲ್ಲಿ ವೇತನ ನೀಡಿದ್ದಲ್ಲಿ ವೇತನದಲ್ಲಿನ ವ್ಯತ್ಯಾಸವನ್ನು ಈಗಾಗಲೇ ಹೆಚ್ಚಿನ ವೇತನ ಶ್ರೇಣಿಯಲ್ಲಿ ನೀಡಿರುವ ಮೊತ್ತದಿಂದ ಸರಿಹೊಂದಿಸಿಕೊಳ್ಳತಕ್ಕದ್ದು.
V. ಈ ಆದೇಶವು ಸರ್ಕಾರದ ಅನುಮೋದನೆ ಪಡೆದು, ಮುಂಬಡ್ತಿ ಹೊಂದಿರುವ ಪ್ರಕರಣಗಳಿಗೆ ಮಾತ್ರ ಅನ್ವಯಿಸತಕ್ಕದ್ದು.

2. ಈ ಆದೇಶವು ರಿಟ್ ಅರ್ಜಿದಾರರುಗಳಿಗೆ ಮತ್ತು ಇದೇ ಸಮಾನಸದೃಶ ಪ್ರಕರಣದ ನೌಕರರಿಗೆ ಮಾತ್ರ ಅನ್ವಯವಾಗುತ್ತದೆ ಹಾಗೂ ಈ ಪ್ರಕರಣವನ್ನು ಇನ್ನಾವುದೇ ಪ್ರಕರಣಗಳಿಗೆ ಪೂರ್ವನಿದರ್ಶನವೆಂದು ಪರಿಗಣಿಸುವಂತಿಲ್ಲ.

3. ಈ ಆದೇಶವನ್ನು ಹೊರಡಿಸಿದ ದಿನಾಂಕದಿಂದ 3 ತಿಂಗಳೊಳಗಾಗಿ ಎಲ್ಲಾ ಸಿಬ್ಬಂದಿಗಳಿಗೆ ವೇತನ ಮತ್ತು ಪಿಂಚಣಿಯನ್ನು ನಿಗಧಿಪಡಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

4. ವೇತನ ಮತ್ತು ಪಿಂಚಣಿ ನಿಗಧಿಪಡಿಸುವಲ್ಲಿ ಯಾವುದೇ ತೊಂದರೆ ಉಂಟಾದಲ್ಲಿ, ಸರ್ಕಾರದ ಮಾರ್ಗದರ್ಶನ ಕೋರುವುದು.

5. ಈ ಆದೇಶವನ್ನು ಆರ್ಥಿಕ ಇಲಾಖೆಯ (ವೆಚ್ಚ-7 & 8) ಟಿಪ್ಪಣಿ ಸಂಖ್ಯೆ:FD 382 EXP-8/2022, ದಿನಾಂಕ:25-08-2022ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್. ಹರ್ಷ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ).

ಗೆ,

**ಕರ್ನಾಟಕ ಸರ್ಕಾರ**

ಸಂಖ್ಯೆ: ಕಾಶಿಇ/236/ತ್ರಿಸೌಯೋ/ಸಿಆರ್2/2017-18

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:21-10-2022.

ಸರ್ಕಾರದ ಆದೇಶ ಸಂಖ್ಯೆ: ಇಡಿ/37/ಯುಪಿಸಿ/2022(ಇ), ದಿನಾಂಕ:30-09-2022ರಲ್ಲಿ ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಖಾಸಗಿ ಅನುದಾನಿತ ಕಾಲೇಜುಗಳ ಬೋಧಕೇತರರಿಗೆ ಗ್ರಂಥಪಾಲಕರಾಗಿ ನೀಡಿರುವ ಮುಂಬಡ್ತಿಯನ್ನು ಸ್ಥಿರೀಕರಿಸಿ ರಾಜ್ಯ ವೇತನ ಶ್ರೇಣಿಯಲ್ಲಿ ವೇತನವನ್ನು ನಿಗಧಿಪಡಿಸಿ ಆದೇಶ ಹೊರಡಿಸಿದ್ದು, ಸದರಿ ಆದೇಶದನ್ವಯ ನಿಗಧಿತ ಅವಧಿಯೊಳಗೆ ಕ್ರಮಕೈಗೊಳ್ಳಲು ಸೂಚಿಸಿ, ಈ ಕೆಳಕಂಡವರಿಗೆ ಪರಿಚಲಿಸಲಾಗಿದೆ.

**ಇವರಿಗೆ,**

1) ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ – ಇವರ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2) ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಗೊಳಪಡುವ ಎಲ್ಲಾ ಆಡಳಿತ ಮಂಡಳಿಗಳ ಕಾರ್ಯದರ್ಶಿಗಳಿಗೆ.
3) ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಗೊಳಪಡುವ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

**ಪ್ರತಿ ರವಾನೆ:-**

1) ಕೇಂದ್ರ ಕಛೇರಿಯ ಎಲ್ಲಾ ವಿಭಾಗದ ಮ್ಯಾನೇಜರ್/ ಅಧೀಕ್ಷಕರುಗಳಿಗೆ
2) ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಿದೆ.
3) ಹೆಚ್ಚುವರಿ ಪ್ರತಿ.
4) ಕಛೇರಿ ಪ್ರತಿ.

25/10/22

**ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು**

Forwarding-Movement